International Journal of Kannada Research
www.kannadajournal.com

ISSN: 2454–5813
IJKR 2018; 4(3): 93-95
© 2018 IJKR
www.kannadajournal.com
Received: 19-05-2018
Accepted: 20-06-2018

**Sunil Jabadi**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ,ಕಲಬುರಗಿ

Correspondence
**Sunil Jabadi**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ,ಕಲಬುರಗಿ

# ಮಹಿಳೆ ಮತ್ತು ಡಾ.ಬಿ.ಆರ್.ಅಂಬೇಡ್ಕರ್

**Sunil Jabadi**

ಭಾರತ ದೇಶವು ಅನೇಕ ಜಾತಿ, ಜನಾಂಗಗಳಿಂದ ಕೂಡಿದ ದೇಶವಾಗಿದೆ. ಇಲ್ಲಿ ಮನುಷ್ಯ ಮನುಷ್ಯರನ್ನು ಮನುಷ್ಯರಂತೆ ಕಾಣವ ಮಾನವಿಯ ಮೌಲ್ಯವಿಲ್ಲದ ಹಿಂದೂಧರ್ಮವು ಈ ದೇಶದ ಮೂಲ ಧರ್ಮದಂತೆ ವರ್ತಿಸುತ್ತಿತ್ತು. ಆ ಸಂದರ್ಭದಲ್ಲಿ ಮನಸ್ಮೃತಿಯು ಈ ದೇಶದ ಕಾನೂನಾಗಿತು. ಇಲ್ಲಿ ಮನು ಬರೆದಿದ್ದನೆ ಪಾಲಿಸಬೇಕಾಗಿತು. ಮನು ತನ್ನ ಕಾನೂನಿನಲ್ಲಿ ಶ್ರೇಣಿಕೃತವಾದ ಜಾತಿ ವ್ಯವಸ್ಥೆಯನ್ನು ರೂಪಿಸಿದನು. ಬ್ರಹ್ಮಣ, ಕ್ಷತ್ರೀಯ, ವೈಶ್ಯರು ಶ್ರೇಷ್ಠರೆಂದು ಗುರುತಿಸಿ ಇದರಲ್ಲಿ ಮುಟ್ಟಿಸಿಕೊಳ್ಳಲು ಯೋಗ್ಯವಲ್ಲದವರನ್ನು ಅಸ್ಪೃಶ್ಯರೆಂದು ಹೇಳಿದ್ದಾನೆ. ಹಾಗಾದರೆ ಮನುವಿನ ಚಾತುರ್ವರ್ಣ ಪದ್ಧತಿಯಲ್ಲಿ ಮಹಿಳೆಯನ್ನ ಯಾವ ವರ್ಗಕ್ಕೆ ಸೇರಿಸಿದ್ದಾನೆ. ಮತ್ತು ಸ್ತ್ರೀಯ ಸ್ಥಾನಮಾನವೇನು? ಎಂದು ಇದೊಂದು ಅನ್ಯೆಸರ್ಗಿಕ ಮತ್ತು ಅವೈಜ್ಞಾನಿಕವಾಗಿದೆ. ಎಂದು ಹಿಂದೂ ಧರ್ಮದ ಕಾನೂನನ್ನು ಖಾರವಾಗಿ ಬಾಬಾಸಾಹೇಬ ಡಾ.ಅಂಬೇಡ್ಕರ್‌ರವರು ಪ್ರಶ್ನಿಸಿದ್ದಾರೆ. ಈ ಚಾತುರ್ವರ್ಣ ವ್ಯವಸ್ಥೆಯಲ್ಲಿ. ಅಸ್ಪೃಶ್ಯರ ಬದುಕು ನಾಯಿ, ನರಿ, ಹಂದಿಗಿಂತ ಕಡೆಯಾಗಿ ಕಾಣಲಾಗುತ್ತಿತ್ತು.

ಹಿಂದೂ ಧರ್ಮದಲ್ಲಿ ಬ್ರಾಹ್ಮಣ, ಕ್ಷೇತ್ರಿಯ, ವೈಶ್ಯ, ಶೂದ್ರ ವರ್ಗದ ಪ್ರತಿಯೊಬ್ಬ ಮಹಿಳೆಯನ್ನು ಅಸ್ಪೃಶ್ಯರಿಗಿಂತ ಗೌಣ್ಯವಾಗಿ ಕಾಣಲಾಗುತಿತ್ತು. ಮತ್ತು ಸ್ತ್ರೀ ಕೇವಲ ನಾಲ್ಕು ಗೊಡೆಗಳಿಗೆ ಮಾತ್ರ ಸಿಮಿತವಾಗಿ, ಹೆಣ್ಣು ಭೋಗದ ವಸ್ತುವಾಗಿ, ಮತ್ತು ಮಕ್ಕಳನು ಹೇರುವ ಯಂತ್ರದಂತೆ ಕಾಣಲಾಗುತ್ತಿತ್ತು. ಹೆಣ್ಣು ಶುಭ ಮತ್ತು ಅಶುಭ ಕಾರ್ಯಕ್ರಮಗಳಲ್ಲಿ ಎಲ್ಲರಂತೆ ಭಾಗಿಯಾಗುವಂತಿಲ್ಲ. ಇಂತಹ ವ್ಯವಸ್ಥೆಯನ್ನು ಕುರಿತು ಎ.ಬಿ. ಕೈತ ಅವರು ಭಾರತದಲ್ಲಿ ಇಂದಿಗೂ ನಾರಿ ಎಲ್ಲ ಧರ್ಮಗಳಿಂದ ತುಳಿತಕ್ಕೀಡಾಗಿದ್ದಾಳೆ. ಆದರೆ ಹಿಂದೂ ಧರ್ಮ ಅಥವಾ ಬ್ರಾಹ್ಮಣರ ಕಾಲದಲ್ಲಿ ಬ್ರಾಹ್ಮಣರಿಂದ ಹೀನಾಯವಾಗಿ ತಿರಸ್ಕೃತಳಾದಷ್ಟು ಮತ್ತು ತುಳಿಸಿಕೊಂಡಷ್ಟು ಈ ಜಗತ್ತಿನ ಬೇರೆಯಾವ ಧರ್ಮದಿಂದಲೂ ತುಳಿತಕ್ಕೆ ಒಳಗಾಗಿಲ್ಲವೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಭಾರತ ದೇಶದ ಸಾಮಾಜಿಕ ವ್ಯವಸ್ಥೆಯಲ್ಲಿ ಅಸ್ಪೃಶ್ಯರಿಗಿಂತ ಹೆಚ್ಚಾಗಿ ಅವಮಾನಕ್ಕೆ ಒಳಗಾದವರು ಈ ದೇಶದ ಪ್ರತಿಯೊಬ್ಬ ಮಹಿಳೆ. ಇಂತಹ ವ್ಯವಸ್ಥೆಯ ವಿರುದ್ಧವಾಗಿ ಅನೇಕ ಮಹಾಪುರುಷರು ಧ್ವನಿ ಎತ್ತಿದ್ದಾರೆ. ಬುದ್ಧನ ಕಾಲಕ್ಕೆ ಸ್ತ್ರೀಯನ್ನು ಸ್ವಾತಂತ್ರಗೊಳಿಸುವ ಹೋರಾಟ ಮಾಡಿದ್ದರು. ಅದರಿಂದಾಗಿ ಸುಮೇಧಾ, ಸಂಘಮಿತ್ರ, ಗುಪ್ತಾ, ಸುಂದರಿ, ನಂದಾ, ಮೊದಲಾದವರನ್ನು ಗುರುತಿಸಬಹುದು. ಇಂತಹ ಮಹಾಪುರುಷರಲ್ಲಿ 12ನೇ ಶತಮಾನದ ಶರಣರ ಕ್ರಾಂತಿಯು ಒಂದಾಗಿದೆ. ವಚನಕಾರರು ಸ್ತ್ರೀಯು ಪುರುಷನಷ್ಟೇ ಸಮಾನಳೆಂದು ತೋರಿಸಿದಕ್ಕಾಗಿ, ಅಕ್ಕ ಮಹಾದೇವಿ, ಅಕ್ಕನಾಗಮ್ಮ, ಗಂಗಾಂಬಿಕೆ, ನೀಲಾಂಬಿಕೆ, ಸಂಕವ್ವೆ, ಕಾಳವ್ವೆ. ಆಯ್ದಕ್ಕಿ ಲಕ್ಕಮ್ಮ, ಮುಕ್ತಾಯಕನಂತ ಮುಂತಾದ ಮಹಿಳೆಯರು ಚರಿತ್ರೆಹರವಾದ ಸಾಧನೆಯನ್ನು ಮಾಡಿದ್ದಾರೆ.

ಆಧುನಿಕ ಸಂದರ್ಭದಲ್ಲಿ ಅನೇಕ ಮಹಾಪುರುಷರಾದ ಜ್ಯೋತಿಬಾ ಫುಲೇ ದಂಪತಿಗಳು, ಶಾಹು ಮಹಾರಾಜರು, ನಾಲ್ವಡಿ ಕೃಷ್ಣರಾಜ ಒಡೆಯರ, ಕ್ರಾಂತಿಕಾರಿ ಪೇರಿಯಾರ, ನಾರಾಯಣಗುರು, ಮುಂತಾದವರು ಅವೈಜ್ಞಾನಿಕವಾದ ಆಚರಣೆ ಮತ್ತು ನಡೆನುಡಿಯಿಂದ ಬದಲಾವಣೆ ಮಾಡುವ ನಿಟ್ಟಿನಲ್ಲಿ ಜನರನ್ನು ಮೌಢ್ಯತೆಯಿಂದ ಹೊರಬರಲು ಅನೇಕ ಹೋರಾಟಗಳನ್ನು ಮಾಡಿದ್ದರು. ಉದಾಹರಣೆಗಾಗಿ ಪೇರಿಯಾರ ಹಿಂದೂ ಧರ್ಮದಲ್ಲಿದ ಗೊಡ್ಡು ಆಚರಣೆ ಮತ್ತು ಸಂಪ್ರದಾಯವನ್ನು ನೇರವಾಗಿ ಟೀಕಿಸಿದ್ದಾರೆ. ತನ್ನ ಹೆಂಡತಿಯ ಕೊರಳಲ್ಲಿದ ತಾಳಿಯನ್ನು ತೆಗೆದು ಅನಿಷ್ಟ ಪದ್ಧತಿಯ ವಿರುದ್ಧ ಕ್ರಾಂತಿಕಾರಿಯಾದ ಹೋರಾಟವನ್ನು ಮಾಡಿದ್ದಾರೆ. ಆದರೂ ಕೂಡಾ ಹಿಂದೂ ಧರ್ಮದ ಗೊಡ್ಡು ಸಂಪ್ರದಾಯಗಳು ಮಹಿಳೆಯರನ್ನು ಅತ್ಯಂತ ಹೀನಾಯವಾಗಿ ಬದುಕನ್ನು ಬದುಕಲು ಮೌಢ್ಯತೆಯ ಕಾಲದಲ್ಲಿ ಸಿಲುಕಿಕೊಂಡಿತು.

ಮಹಿಳೆಯರು ಹೀನಾಯವಾಗಿ ನಾಯಿ, ನರಿ, ಹಂದಿಗಿಂತ, ಕಡೆಯಾಗಿ ಬದುಕುತ್ತಿದ್ದ ಮಹಿಳೆಯರ ಬಾಳಿಗೆ ಈ ದೇಶದಲ್ಲಿ ಸಂವಿಧಾನಿಕವಾಗಿ ಸ್ವಾತಂತ್ರ್ಯವನ್ನು ತಂದುಕೊಟ್ಟವರು ಅದು ಡಾ. ಬಾಬಾಸಾಹೇಬ ಅಂಬೇಡ್ಕರ್. ಈ ದೇಶದಲ್ಲಿ ಕಾನೂನಾತ್ಮಕವಾಗಿ ಹೆಣ್ಣಿಗೆ ರಕ್ಷಣೆ ಇದೆ ಎಂದರೆ ಅದು ಡಾ.ಬಿ.ಆರ್. ಅಂಬೇಡ್ಕರ್ ರವರಿಂದ ಮಾತ್ರ ಸಾಧ್ಯ. ಹೀಗಾಗಿ ಈ ದೇಶದಲ್ಲಿ ಮೊದಲ ಮಹಿಳಾ ಪ್ರಧಾನಿಯಾಗಿ ಇಂದಿರಾಗಾಂಧಿ,

ಪ್ರತಿಭಾ ಪಾಟೀಲ ರಾಷ್ಟ್ರಪತಿಯಾಗಿ, ಲೋಕಸಭೆ ಸ್ಪೀಕರ ಮೀರಾಕುಮಾರಿ ನಾಲ್ಕು ಬಾರಿ ಉತ್ತರ ಪ್ರದೇಶದ ಮುಖ್ಯ ಮಂತ್ರಿಯಾಗಿದ ಮಾಯಾವತಿ, ಜಯಲಲಿತ ಇಂತಹ ಅನೇಕ ಮಹಿಳೆಯರು ಡಾ. ಬಾಬಾಸಾಹೇಬರ ಬರೆದ ಸಂವಿಧಾನದಿಂದ ಆಳ್ವಿಕೆ ಮಾಡಲು ಸಾಧ್ಯವಾಗಿದೆ ಎಂಬುವುದನ್ನು. ಯಾರು ಮರೆಯುವಂತಿಲ್ಲ.

**ಮನು – ಮಹಿಳೆ**

ಮನು ಮಹಿಳೆಯನ್ನು ಅವೈಜ್ಞಾನಿಕತೆಯಿಂದ ಕೂಡಿರುವ ಮೂಢ ನಂಬಿಕೆ, ಅಂಧಶ್ರದ್ಧೆ ಮತ್ತು ಕೆಟ್ಟ ಸಂಪ್ರದಾಯ ಆಚರಣೆಗಳನ್ನು ರೂಢಿಸಿಕೊಂಡು ಬರಬೇಕೆಂದು ಪ್ರೋತ್ಸಾಹಿಸಿದ್ದಾನೆ. ಹೀಗಾಗಿ ನಾರಿಯು ಸ್ವಾತಂತ್ರವಾಗಿ ವಿಚಾರ ಮಾಡುವುದಕ್ಕೆ ಆಸ್ಪದ ಮಾಡಿಕೊಡದೆ ಅವಳ ಬಯಕೆ ಮತ್ತು ಆಸೆಯನ್ನು ಹಾಳು ಮಾಡಿದ್ದಾನೆ. ಸಮಾಜದಲ್ಲಿ ನಡೆಯುವ ಯಾವುದೇ ಶುಭ ಮತ್ತು ಅಶುಭ ಕಾರ್ಯಕ್ರಮಗಳಲ್ಲಿ ಭಾಗಿಯಾಗುವಂತ್ತಿಲ್ಲ. ಯಾವುದೇ ಒಂದು ಕಾರ್ಯ ಚಟುವಟಿಕೆಯ ಕುರಿತು ಯಾವುದು ಸರಿ ? ಯಾವುದು ತಪ್ಪು ? ಎಂದು ಸ್ವಂತ ವಿಚಾರ ಮಾಡುವಷ್ಟು ಕಾಲಾಕಾಶವನ್ನು ಹೆಣ್ಣಿಗೆ ಕೊಡದೇ ಒಂದಲ್ಲ ಒಂದು ರೀತಿಯಲ್ಲಿ ಗೊಡ್ಡ ಸಂಪ್ರದಾಯಗಳ ಆಚರಣೆಯಲ್ಲಿ ಸಿಗಿ ಬೀಳುವಂತೆ ಮಾಡಿದದಾನೆ. ಹೀಗಾಗಿ ಮಹಿಳೆಯನ್ನು ಅತ್ಯಂತ ಹೀನಾಯವಾಗಿ ನಡೆಸಿಕೊಂಡಿದ್ದಾನೆ. ಮನು ಬರೆದ ಮನುಸ್ಮೃತಿಯಿಂದ ಈ ದೇಶದ ಕಾನೂನಾಗಿ ಪಾಲಿಸಬೇಕಾಗಿತ್ತು. ಹೀಗಾಗಿ ಮಹಿಳೆ ಅತ್ಯಂತ ಹಿಂದುಳ್ವಿಕೆಗೆ ಕಾರಣ ಮನುಸ್ಮೃತಿಯಾಗಿದೆ. ಮನುಸ್ಮತಿಯು ಮಹಿಳೆಯನ್ನು ಧರ್ಮದ ಹೆಸರಿನಲ್ಲಿ ಶೋಷಣೆ ಮಾಡಲಾಗಿದೆ. ಆದ್ದರಿಂದ ಪುರುಷ ಪ್ರಧಾನ ಸಮಾಜವು ಮಹಿಳೆಯು ಕೇವಲ ಭೋಗದವಸ್ತು ಎಂದು ಪರಿಗಣಿಸಿ, ಅವಳನ್ನು ಭೋಗಿಸುತ್ತ ಬಂದಿದ್ದಾನೆ. ವಿನಾ ಅವಳು ನಮ ಹಾಗೆ ಮನುಷ್ಯಳೆಂದು ತಿಳಿಯದೇ ಕೇವಲ ಮಕ್ಕಳನು ಸೃಷ್ಟಿಸುವ ಯಂತ್ರದಂತೆ ಕಂಡನು. ಸ್ತ್ರೀಗೆ ಮನುನ ದೃಷ್ಟಿಯಲ್ಲಿ ಯಾವುದೇ ರೀತಿಯಾದ ಸ್ವಾತಂತ್ರ್ಯವಿಲ್ಲ. ಸ್ತ್ರೀಯ ಧರ್ಮ ಸಾಧನೆ, ಆಧ್ಯಾತ್ಮ ಸ್ವಾತಂತ್ರ್ಯ ಇವೆಲ್ಲ ಅನಗತ್ಯವಾದವುಗಳು ಅವಳು ಪ್ರಕೃತ ಧರ್ಮಕ್ಕೆ ಅವು ವಿರುದ್ಧವೆಂದು ಅವನ ಕಲ್ಪನೆ. ಅವಳು ನಾಲ್ಕು ಗೋಡೆಗಳ ಮಧ್ಯದಲೇ ಬದುಕಬೇಕು. ಒಂದು ವೇಳೆ ನಡೆದುದ್ದೆ ಆದರೂ ಅದು ಮಂತ್ರ ರಹಿತವಾಗಿ ನಡೆಯಬೇಕು. ಎಂಬುವುದೇ ಅವನ ವಿಚಾರ. ಹೆಣ್ಣು ಅಕ್ಷರ ಕಲಿಯುವಂತಿಲ್ಲ, ಅದು ಧರ್ಮ ವಿರೋಧಿಯಾದುದ್ದು ಎಂದು ಅವಳಿಗಿರುವ ಮೂಲಭೂತವಾದ ಹಕ್ಕನ್ನು ಕಿತ್ತುಕೊಂಡು ಅವಳನ್ನು ಬಲಹೀನಳನ್ನಾಗಿ ಮಾಡಲಾಗಿದೆ.

**ಡಾ.ಬಿ. ಅರ್.ಅಂಬೇಡ್ಕರ – ಮಹಿಳೆ**

ಶತಶತಮಾನಗಳಿಂದಲೂ ಪುರುಷ ಪ್ರಧಾನ ಸಮಾಜದಿಂದ ಅಸ್ಪೃಶ್ಯರಿಗಿಂತ ಕೀಳಾಗಿ ಶೋಷಣೆಗೆ ಒಳಗಾದ ಮಹಿಳೆಯನ್ನು ಸಂವಿಧಾನಿಕವಾಗಿ ಪುರುಷನಷ್ಟೇ ಸಮಾನಳು ಎಂದು ಡಾ. ಬಿ.ಆರ್. ಅಂಬೇಡ್ಕರ್‌ರವರು ಕಾನೂನನ್ನು ರೂಪಿಸಿದ್ದರು. ಹೆಣ್ಣಿಗೂ ತಂದೆಯ ಆಸ್ತಿಯಲ್ಲಿ ಪುರುಷನಷ್ಟೇ ಸಮಾನವಾಗಿ ಆಸ್ತಿಯನ್ನು ನೀಡಬೇಕು. ಆಸ್ತಿ ಹಕ್ಕು ಮತ್ತು ಮಹಿಳೆಯರಿಗಾಗಿ ವಿಶೇಷವಾದ ಹಿಂದು ಕೊಡಬಿಲ್ಲ ಎಂಬ ಕಾನೂನನ್ನು ರೂಪಿಸಿದರು. ಇದು ಜಾರಿಯಾಗದ ಕಾರಣ ತಮ್ಮ ಕಾನೂನು ಮಂತ್ರಿ ಪದವಿಯನ್ನು ಮಹಿಳೆಯರಿಗಾಗಿ ರಾಜೀನಾಮೆ ಸಲ್ಲಿಸಿದ್ದರು.

ಡಾ. ಬಾಬಾಸಾಹೇಬ ಅಂಬೇಡಕರ್ ರವರ ಹೋರಾಟದ ಫಲವಾಗಿ ಹೆಣ್ಣು ಕೇವಲ ನಾಲ್ಕು ಗೊಡೆಗಳ ಮಧ್ಯ ಬದುಕದೆ ಇಂದು ಎಲ್ಲ ಕ್ಷೇತ್ರದಲ್ಲಿ ಸ್ಪರ್ಧಿಸುತ್ತಿದ್ದಾಳೆ. ಇದಕೆಲ್ಲ ಮೂಲಕಾರಣ ಡಾ. ಬಾಬಾಸಾಹೇಬ ಅಂಬೇಡ್ಕರ್‌ರವರು ಬರೆದ ಸಂವಿಧನವಾಗಿದೆ.

ಡಾ.ಬಿ.ಆರ್. ಅಂಬೇಡ್ಕರ್ ಕೇವಲ ಒಂದು ಜನಾಂಗ, ಧರ್ಮ, ಒಂದು ಸಮುದಾಯಕೆ ಸೀಮಿತವಾಗದೇ ಇವರೊಬ್ಬ ರಾಷ್ಟ್ರ ನಾಕರಾಗಿದ್ದಾರೆ. ಸಾವಿರಾರು ವರ್ಷಗಳಿಂದ ಹೀನಾಯವಾದ ಬದುಕನ್ನು ಸಾಗಿಸುತ್ತಿದ್ದ ಮಹಿಳೆಯರಿಗೆ ಸ್ವಾತಂತ್ರ್ಯದ ಬದುಕನ್ನು ಕಟ್ಟಿಕೊಟ್ಟಿದ್ದಾರೆ. ಇಂತಹ ರಾಷ್ಟ್ರ ನಾಯಕರನ ಕೇವಲ ಒಂದು ವರ್ಗಕ್ಕೆ ಸಿಮಿತಗೊಳಿಸದೇ ಇವರೊಬ್ಬ ವಿಶ್ವ ನಾಯಕರಾಗಿದ್ದಾರೆ. ಪ್ರತಿಯೊಂದು ಮಹಿಳೆಯರು ಇಂದು ಡಾ.ಬಾಬಾಸಾಹೇಬ ಅಂಬೇಡ್ಕರನ ಮರೆಯುವಂತಿಲ್ಲ. ಒಂದು ವೇಳೆ ಅಂಬೇಡ್ಕರ್‌ರನ್ನು ಮರೆತ ಮಹಿಳೆ ತನ್ನ ತಾಯಿಯನ್ನೇ ಮರತಂತೆ.

ಸ್ವತಂತ್ರ್ಯ ಭಾರತದ ಆಶಯಗಳು ಹಾಗೂ ಆಧುನಿಕ ಸಮಾಜದ ಸಮಾನತೆಯ ಪರಿಕಲ್ಪನೆಗಳಿಗೆ ತಕ್ಕ ಹಾಗೆ ಹಿಂದೂ ಕಾನೂನು ಸಂಹಿತೆಯನ್ನು ನಿರೂಪಿಸುವ ಜವಾಬ್ದಾರಿಯನ್ನು ಡಾ. ಬಾಬಾಸಾಹೇಬ ಅಂಬೇಡ್ಕರ್‌ರರು ವಹಿಸಿಕೊಂಡರು ಇದು ಭಾರತದಲ್ಲಿರುವ ಮಹಿಳೆಯರ ಹಿತದೃಷ್ಟಿಗಾಗಿ ಮತ್ತು ಅವರ ಏಳಿಗೆಗಾಗಿ ಈ ಕಾನೂನು ಮುಖ್ಯ ಪಾತ್ರವಹಿಸಿಕೊಳಲ್ಲಿದೇ ಎಂದು ನಂಬಿ ಹಿಂದೂ ಕಾನೂನು ಸಂಹಿತೆಯ ಕರಡನ್ನು ಸಿದ್ಧಪಡಿಸಿದರು. ಇವರು ಸಿದ್ಧಪಡಿಸಿದ ಕಾನೂನಿನಲ್ಲಿ ಮಹಿಳೆಯರಿಗೆ ಅತ್ಯಾವಶ್ಯಕವಾಗಿ ಬೇಕಾಗಿರುವ ಪ್ರಮುಖ ಏಳು ಬೇಡಿಕೆಗಳನಿಟ್ಟರು.

1. ಮೃತನಾದ ಗಂಡಸಿನ ಹೆಣ್ಣು ಮಕ್ಕಳಿಗೆ ಗಂಡು ಮಕ್ಕಳಿಗೆ ಸಮನಾದ ಆಸ್ತಿಯ ಪಾಲು.
2. ವಿಧವೆಯರು ಪಡೆದ ಆಸ್ತಿಯ ಮೇಲೆ ಅವರಿಗೆ ಸಂಪೂರ್ಣ ಅಧಿಕಾರ.
3. ಬಹುಪತ್ನಿತ್ವದ ನಿರಾಕರಣೆ
4. ಅಂತರ್ಜಾತೀಯ ವಿವಾಹಕ್ಕೆ ಅವಕಾಶ.
5. ಹಿಂದುಗಳು ಅನ್ಯಜಾತಿಯ ಮಕ್ಕಳನ್ನು ದತ್ತು ತೆಗೆದುಕೊಳ್ಳುವ ಅಧಿಕಾರ.
6. ಹೆಂಡತಿಗೆ ವಿವಾಹ ವಿಚ್ಛೇದನಕ್ಕೆ ಮನವಿ ಸಲ್ಲಿಸುವ ಹಕ್ಕು.
7. ಅವಿಭಜಿತ ಆಸ್ತಿ ಪದ್ಧತಿಯನ್ನು ವಿಸರ್ಜಿಸಿ ವೈಯಕ್ತಿಕ ಆಸ್ತಿ ಪದ್ಧತಿಗೆ ಕಾನೂನು ಮಾನ್ಯತೆ ನೀಡುವುದು, ಈ ಎಲ್ಲಾ ಹಕ್ಕುಗಳನ್ನು ನೀಡುವುದರಿಂದ ಮಹಿಳೆಯು ಸಾಮಾಜಿಕ ಉತ್ಪಾದನೆಯಲ್ಲಿ ಪಾಲ್ಗೊಳ್ಳುವಿಕೆ. ವೈವಾಹಿಕ ಹಕ್ಕಿನ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಸಮಾಜದಲ್ಲಿ ಘನತೆಯ ಬದುಕು ಮತ್ತು ಗೌರವಿತ ಸ್ಥಾನ–ಮಾನಗಳು ಇವು. ಮಹಿಳಾ ಸ್ವಾತಂತ್ರ್ಯದ ಮೊದಲು ಮೆಟ್ಟಿಲಕಲುಗಳಾಗಿವೆ. ಹಿಂದು ಕಾನೂನು ಸಂಹಿತೆಯಿಂದಲೇ ಸಾಧ್ಯವೆಂದು ಅಂಬೇಡ್ಕರ್‌ರವರು ಬಲವಾದ ವಾದವಾಗಿತ್ತು. ಆದರೆ ಹಿಂದೂ ಕೊಡಬಿಲ್ ಜಾರಿಯಾಗಲಿಲ್ಲ. ಹೀಗಾಗಿ ಅಂಬೇಡ್ಕರ್‌ರರು ಮಹಿಳೆಯರಿಗೆ ಅನ್ಯಾಯವಾಗುತ್ತೆಂದು ತಿಳಿದು ತಮ್ಮ ಕಾನೂನು ಮಂತ್ರಿಗೆ ರಾಜೀನಾಮೆ ಸಲ್ಲಿಸುತ್ತಾರೆ. ತದನಂತರದಲ್ಲಿ ನೆಹರು ಅವರು ಬಾಬಾಸಾಹೇಬ ಡಾ. ಅಂಬೇಡ್ಕರ್‌ರರು ರೂಪಿಸಿದ ಕಾನೂನುಗಳನ್ನು ಒಂದೊಂದಾಗಿ ಜಾರಿ ಮಾಡಲಾಯಿತ್ತು.
8. ಹಿಂದೂ ವಿವಾಹ ಕಾನೂನು – 1956
9. ಹಿಂದೂ ಉತ್ತರಾಧಿಕಾರ ಕಾನೂನು – 1956
10. ಹಿಂದೂ ಅಪ್ರಪ್ತತೆ ಮತ್ತು ಪೋಷಕತ್ವ ಕಾನೂನು – 1956
11. ಹಿಂದೂ ದತ್ತಕ ಮತ್ತು ಜೀವನಾಂಶ ಕಾನೂನು – 1956

ಅಲ್ಲದೆ ಅಂಬೇಡ್ಕರರು ಮಹಿಳೆಯರು ಒಂದು ದಿನದಲ್ಲಿ ಕೇವಲ ಎಂಟು ಗಂಟೆಗಳು ಮಾತ್ರ ಕೆಲಸ ಮಾಡಬೇಕು, ಯಾಕಂದ್ರೆ ಇಡಿ ಮನೆಯ ಜವಾಬ್ದಾರಿಯನ್ನು ಹೊತ್ತಿರುತ್ತಾಳೆ. ಅವಳಿಗೆ ಪ್ರಥಮ ಆದ್ಯತೆಯನ್ನು ನೀಡಬೇಕು. ಮಹಿಳೆಯರಿಗೆ ಹೆರಿಗೆ ರಜೆ ಸವಲಭ್ಯವನ್ನು ನೀಡಬೇಕು ಮತ್ತು ಇದು ಕಾನೂನಾಗಿ ಜಾರಿ ಮಾಡಬೇಕು ಎಂದು ಹೇಳಿದ್ದಾರೆ.

ಮಹಿಳೆಯರನ್ನು ಹೀನಾಯ ಸ್ಥಿತಿಗೆ ತಳಿದ ಮನು ಶಾಸ್ತ್ರದ ವಿರೂದ್ಧ ಬಾಬಾಸಾಹೇಬ ಡಾ. ಅಂಬೇಡ್ಕರ್ ಹೋರಾಟ ಮಹಿಳೆಯು ಕೂಡಾ ಪುರುಷನಷ್ಟೆ ಸಮಾನಳೆಂದು ಕಾನೂನಾತ್ಮಕವಾದ ಸಂವಿಧನದ ಮೂಲಕ ಹೆಣ್ಣಿಗೆ ಗೌರವನ್ನು ನೀಡಿದ್ದಾರೆ. ಯಾವುದೇ ಸಮುದಾಯದ ಏಳ್ಗೆಯನ್ನು ಅಳೆಯಬೇಕಾದರೆ ಆ ಸಮುದಾಯದ ಸ್ತ್ರೀಯರ ಏಳಿಗೆಯನ್ನು ಪರಿಗಣಿಸಬೇಕು ಎಂದು ಮಹಿಳೆಯರ ಸ್ತಿತಿಗತಿಯನ್ನು ಸಮಾಜದ ಏಳಿಗೆಯ ಸೂಚ್ಯಾಂಕವಾಗಿ ಪರಿಗಣಿಸಿದವರು ಅಂಬೇಡ್ಕರರು ಮಾತ್ರ. ಭಾರತದೇಶದಲ್ಲಿ ಮಾನವನ ಹಕ್ಕು ಮತ್ತು ಮಹಿಳಾ ಹಕ್ಕು ಇವೆರಡನ್ನು ಸಂವಿಧಾನಾತ್ಮಕವಾಗಿ ಹೋರಾಟ ಮಾಡಿ ಕಾನೂನಿನ ಚೌಕಟನ್ನು ರೂಪಿಸಿದ ಮೊದಲ ನಾಯಕರಾಗಿದ್ದಾರೆ.

ಹೆಣ್ಣಿಗೆ ಹಿಂದೂ ಸಮಾಜವು ಅತ್ಯಂತ ಶೋಷಣೆಗೆ ಒಳಪಡಿಸಿತು. ಭಾರತದ ಸಮಾಜವ್ಯವಸ್ಥೆಯು ಹೆಣ್ಣಿನ ದೇವತೆಯಂದು ಗೌರವಿಸಿ ಮತ್ತೊಂದು ಕೈಯಲ್ಲಿ ಬೆತ್ತವನ್ನು ಹಿಡಿದು ಶೋಷಣೆ ಮಾಡಲಾಗಿದೆ ಎಂದು ಅಂಬೇಡ್ಕರ್‌ರವರು ಅರಿತುಕೊಂಡಿದ್ದರು. ಆದ್ದರಿಂದ ಹೆಣ್ಣಿಗೆ ಶೀಕ್ಷಣ ನೀಡುವುದು ಅತ್ಯಂತ ಸೂಕ್ತ ಮತ್ತು ಪ್ರಯೋಜನವಾದದ್ದು, ಮಹಿಳೆಯು ಪುರುಷನೊಂದಿಗೆ ಒಟ್ಟೊಟಿಗೆ ಶಿಕ್ಷಣ ಪಡೆಯುವುದು ಅನಿವಾರ್ಯವಿದೆ ಎಂದು ಬಲವಾಗಿ ನಂಬಿದರು. ಬಾಬಾಸಾಹೇಬ ಡಾ. ಅಂಬೇಡ್ಕರ್‌ರು ಹೊರತರುತ್ತಿದ್ದ ಮೂಕ ನಾಯಕ ಹಾಗೂ ಬಹಿಷ್ಕೃತ ಭಾರತ ಪತ್ರಿಕೆಯಲ್ಲಿ ಮಹಿಳಾ ಸಮಸ್ಯೆಗಳ ಕುರಿತು ಚರ್ಚೆ ಮಾಡಲಾಗುತ್ತಿತ್ತು.

ಡಾ. ಬಿ. ಆರ್. ಅಂಬೇಡ್ಕರ್‌ರು ಮಹಿಳೆಯರ ಬಗ್ಗೆ ಅತ್ಯಂತ ಕಾಳಜಿ ಉಳ್ಳುವಂತವರಾಗಿದ್ದರು. ಯಾವುದಕ್ಕೂ ಹೆಣ್ಣು ಪುರುಷನ ಸಮಾನಳು ಎಂದು ತಿಳಿದು 1927 ರಲ್ಲಿ ಮಹಾಡರ ಸತ್ಯಾಗ್ರಹ ಮೆರವಣಿಗೆಯಲ್ಲಿ 500 ಮಹಿಳೆಯರನ್ನು ಹೋರಾಟದಲ್ಲಿ ಪಾಲ್ಗೊಂಡಿದ್ದರು. ಅಷ್ಟೇಯಲ್ಲದೇ 1927ರಲ್ಲಿ ಕಾಳರಾಮ ದೇವಸ್ಥನ ಪ್ರವೇಶ ಮಾಡುವ ಸಂದರ್ಭದಲ್ಲಿಯೂ ಕೂಡಾ ಮಹಿಳೆಯರನ್ನು ಭಾಗಿ ಮಾಡಿಕೊಂಡಿದ್ದರು. 1927 ರಲ್ಲಿ ತಾವು ಸ್ಥಾಪನೆ ಮಾಡಿದ ಡಿಪ್ರೆಸ್ಡ್‌ಕ್ಲಾಸ್ ವಿಮೆನ್ಸ್ ಎಂಬ ಅಸೋಸಿಯೇಷನ್ ಮೂಲಕ ಹೆಣ್ಣು ಮಕ್ಕಳಿಗೆ ಜಾಗೃತಿ ಮಾಡಲಾಗಿತು ಮತ್ತು ಈ ಅಸೋಸಿಯೇಷನ್ ಆಯೋಜಿಸಿದ ಸಮಾವೇಶದಲ್ಲಿ 3000 ಸಾವಿರ ಮಹಿಳೆಯರನ್ನು ಪಾಲ್ಗೊಂಡಿದ್ದರು. ಈ ಸಮಾವೇಶದಲ್ಲಿ ಅಂಬೇಡ್ಕರ್‌ರರು ಮಹಿಳೆಯರನ್ನು ಉದ್ದೇಸಿಸಿ ಮಾತನಾಡುತ ನಿಮ್ಮ ಹೆಣ್ಣು ಮಕ್ಕಳಿಗೆ ಶಾಲೆಗೆ ಹಾಕಿ ಎಂದು ಕರೆಕೊಟ್ಟರು. ಮಹಿಳೆಯರಲ್ಲಿ ನಾವು ಪುರುಷನಷ್ಟೇ ಸಮಾನಳು ಎಂಬ ಆತ್ಮ ಗೌರವವನ್ನು ನೀಡಿದ್ದರು.

ಡಾ. ಅಂಬೇಡ್ಕ್‌ರ್‌ರರ ತಾತ್ವಿಕ ಬೆಂಬಲ ಹಾಗೂ ಸಂಘಟನೆಗಳ ಬಲದೊಂದಿಗೆ ಮಹಿಳೆಯನ್ನು ಜಾಗೃತಿ ಮಾಡಿ ಹೋರಾಟದ ಮೂಲಕವೇ ಹೊಸ ಅಧ್ಯಾಯವನೇ ಪ್ರಾರಂಭಿಸಿದ್ದರು ಹೀಗಾಗಿ ಅನೇಕ ಕಡೆಗಳಲ್ಲಿ ಮಹಿಳಾ ಸಮಾವೇಶ ಹೋರಾಟಗಳು ಶುರುವಾದವು ಆಗ ಮಹಿಳೆಯರು ಕೂಡಾ ಪುರುಷನಷ್ಟೇ ಸಮಾನಳು ಎಂದು ತಿಳಿದು ಆತ್ಮ ಚರಿತ್ರೆ, ಕಥೆ, ಕವನ, ನಾಟಕ, ಹೀಗೆ ಸಂಘಟನೆಯ ಮೂಲಕ ಹೊಸ ಬದುಕನ್ನು ಕಟ್ಟಿಕೊಳ್ಳಲು ಮುಂದಾದ್ದರು. ಆಗ ಹಿಂದೂ ದೇವಸ್ಥಾನಗಳಲ್ಲಿ ಪ್ರವೇಶ, ಕುಡಿಯುವ ನೀರು ಅಷ್ಟೇಯಲ್ಲ. ಸಾಮಾಜಿಕ ಹಕ್ಕುಗಳ ಜೊತೆಗೆ ರಾಜಕೀಯ ಹಕ್ಕು ಬೇಕೆಂದು ವೈಸರಾಯರ ಮುಂದೆ ಬೇಡಿಕೆಯನ್ನು ಇಟ್ಟು ಹೋರಾಟ ಮಾಡಿದ್ದರು. ಇಂತಹದೊಂದು ಅಲೆಯನ್ನು ಏಳಲು ಡಾ. ಬಿ. ಆರ್. ಅಂಬೇಡ್ಕರ್‌ರರೆ ಕಾರಣರಾಗಿದ್ದಾರೆ.

ಡಾ. ಅಂಬೇಡ್ಕರ್‌ರರು ಶಿಕ್ಷಣ, ಸಂಘಟನೆ, ಹೋರಾಟ ಎಂಬ ಈ ಮೂರು ಸೂತ್ರದ ಮೂಲಕ ಸ್ತ್ರೀವಾದಿ ಹೋರಾಟಗಳಿಗೆ ತಾತ್ವಿಕತೆಯಾಗುವಷ್ಟು, ಗಟಿತನ ಪಡೆದುಕೊಂಡಿವೆ. ಆದರೂ ಕೂಡಾ ಸಂವಿಧನವು ಜಾರಿಯಾಗಿ 65 ವರ್ಷಗಳ ಕಾಲ ಘಟಿಸಿದ್ದರು. ಇನ್ನೂ ಕೂಡಾ ಹೆಣ್ಣು ಮಕ್ಕಳಿಗೆ ಹಿಂದೂ ದೇವಾಲಯಗಳಲ್ಲಿ ಪ್ರವೇಶವಿಲ್ಲ ಅವಳನ್ನು ಯಾವುದೋ ಒಂದು ಅವೈಜ್ಞಾನಿಕ ಕಾರಣದಿಂದಾಗಿ ದೇವಾಲಯದ ಹೊರಗೆ ನಿಲ್ಲಿಸಲಾಗಿದೆ. ಅಂಬೇಡ್ಕರ್‌ರರ ಹೋರಾಟದ ಫಲದಿಂದಾಗಿ ಮಹಿಳೆಯು ರಾಜಕೀಯವಾಗಿ ಬೆಳೆದರೂ ಕೂಡಾ ಅವಳಿಗೆ ಒಂದಲ್ಲ ಒಂದು ರೀತಿಯಲ್ಲಿ ಶೋಷಣೆ ಮಾಡಲಾಗುತ್ತಿದೆ.

ಈ ದೇಶದಲ್ಲಿ ವಿಜ್ಞಾನ – ತಂತ್ರಜ್ಞಾನ ಎಷ್ಟು ವೇಗವಾಗಿ ಬೆಳೆಯುತ್ತಿದೆಯೋ ಅಷ್ಟೇ ವೇಗವಾಗಿ ಅಜ್ಞಾನ – ಮೂಢನಂಬಿಕೆ ಬೆಳೆಯುತ್ತಿದೆ. ಇದಕ್ಕೆಲ್ಲ ಮೂಲಕಾರಣ ರಾಜಕೀಯ.

ಡಾ. ಬಿ. ಆರ್. ಅಂಬೇಡ್ಕರ್‌ರನ್ನು ಕೇವಲ ಸಾಮಾಜಿಕ ಹೋರಾಟ ಮಾಡದೇ ಪ್ರತಿಯೊಂದು ಕ್ಷೇತ್ರದಲ್ಲಿ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಬಯಸಿದವರು. ಹೀಗಾಗಿ ಡಾ.ಬಿ.ಆರ್.ಅಂಬೇಡ್ಕರ್ ಇಲ್ಲದ ಭಾರತ ಅದು ಭಾರತವೇ ಅಲ್ಲ. ಯಾಕಂದರೆ ಡಾ. ಬಿ.ಆರ್.ಅಂಬೇಡ್ಕರ ಇಲ್ಲದ ಭಾರತದಲ್ಲಿ ಜಾತಿವ್ಯವಸ್ಥೆಯಿಂದಾಗಿ ದಲಿತರಿಗೆ ಮತ್ತು ಮಹಿಳೆಯರಿಗೆ ಶಿಕ್ಷಣ, ಉದ್ಯೋಗ ಮತ್ತು ಸಾಮಾಜಿಕ ಸಮಾನತೆಯ ಹಕ್ಕನ ಕಸಿದುಕೊಳ್ಳಲಾಗಿತು. ಆದರೆ ಡಾ.ಬಿ.ಆರ್. ಅಂಬೇಡ್ಕರ್ ಇದ ಭಾರತದಲ್ಲಿ ದಲಿತರಿಂದ ಯಾವ ಹಕ್ಕನ ಕಸಿದುಕೊಳ್ಳಲಾಗಿತೊ ಅವುಗಳೆಲ್ಲವು ಮರಳಿ ಪಡೆಯಲಾಯಿತು. ಹೀಗಾಗಿ ಬಾಬಾಸಾಹೇಬ ಡಾ. ಅಂಬೇಡ್ಕರ್‌ರು ಇಲ್ಲದ ಭಾರತ ಭಾರತವೇ ಅಲ್ಲ.